**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.49/2024**

ಪ್ರಾ.ಸಾ. 14

ಚಾ.ಸಾ. 11

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 29.11.2025**

| | |
|---|---|
| ಸಾಕ್ಷಿದಾರರ ಹೆಸರು | ವಿಜಯ್ |
| ತಂದೆಯ ಹೆಸರು | ಚಿಕ್ಕತಿಮ್ಮಯ್ಯ |
| ವಯಸ್ಸು | 40 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ದುಂಡನಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ನಾನು ಈಗ ನೋಡುತ್ತಿರುವ ನಿಪಿ.13 ನೋಟಿಸಿನಲ್ಲಿ ನನ್ನ ಸಹಿ ಇದೆ. ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ.13 ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ಕೆಸ್ತೂರು ಪೊಲೀಸ್ ಠಾಣೆಗೆ ಹೋಗಿದ್ದಾಗ ಅಲ್ಲಿ ಹಾಕಿದ್ದೇನೆ. ಪೊಲೀಸರು ಸಹಿ ಮಾಡಲು ಹೇಳಿದಾಗ ಸಹಿ ಮಾಡಿದ್ದೇನೆ. ಯಾವ ವಿಚಾರಕ್ಕೆಂದು ನನಗೆ ಗೊತ್ತಿಲ್ಲ. ನಾನು ಈಗ ಮತ್ತೊಂದು ಸಹಿ ನೋಡುತ್ತಿದ್ದೇನೆ. ಅದರಲ್ಲಿ ಕೂಡ ನನ್ನ ಸಹಿ ಇದೆ. ನಿಪಿ.10 ರಲ್ಲಿ ತನ್ನ ಸಹಿ ಎಂದು ಗುರುತಿಸಿದ ಸಹಿಯನ್ನು ನಿಪಿ.10 ಬಿ ಎಂದು ಗುರುತಿಸಲಾಯಿತು. ನಿಪಿ.10 ಕ್ಕೆ ಕೂಡ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಅದಕ್ಕೆ ಬೇರೆ ಯಾರು ಸಹಿ ಮಾಡಿದ್ದಾರೆ ನನಗೆ ಗೊತ್ತಿಲ್ಲ. ನಿಪಿ.10 ಮತ್ತು ನಿಪಿ.13 ಕ್ಕೆ ಸಹಿ ಮಾಡುವಾಗ ನಾನು ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನಾನು ನೋಡಿಲ್ಲ. ನಮ್ಮನ್ನು 2 ನೇ ಆರೋಪಿ ಎಲ್ಲಿಗೂ ಕೂಡ ಕರೆದುಕೊಂಡು ಹೋಗಿಲ್ಲ. ಸಹಿ ಮಾಡುವಾಗ ಪೊಲೀಸರ ವಶದಲ್ಲಿ 2 ನೇ

ಆರೋಪಿಯನ್ನು ನಾನು ನೋಡಿಲ್ಲ. ಎರಡು ವರ್ಷಗಳ ಹಿಂದೆ ಮಧ್ಯಾಹ್ನ ನಾನು ನಿಪಿ.10 ಮತ್ತು ನಿಪಿ.13 ಕ್ಕೆ ಸಹಿ ಮಾಡಿದ್ದೇನೆ. ನಾನು ಈಗ ನೋಡುತ್ತಿರುವ ನಿಪಿ.11 ಮತ್ತು ನಿಪಿ.12 ಫೋಟೋಗಳಲ್ಲಿ ನಾನೂ ಕೂಡ ಇದ್ದೇನೆ. ನಮ್ಮ ಜೊತೆ 2 ನೇ ಆರೋಪಿ ಮತ್ತು ಚಾಸಾ.12 ಪ್ರಾಸಾ.9 ಹಾಜರು ಇದ್ದಾರೆ. ನಿಪಿ.11 ರಲ್ಲಿ ಕಾಣುತ್ತಿರುವ ಮನೆ ಕೃಷ್ಣ ಎಂಬುವವರ ಮನೆ. ಅದರಲ್ಲಿ 2 ನೇ ಆರೋಪಿ ಆ ಮನೆಯನ್ನು ತೋರಿಸುತ್ತಿದ್ದಾನೆ. ನಿಪಿ.12 ರಲ್ಲಿ ಕಾಣುತ್ತಿರುವ ರಸ್ತೆ ನಮ್ಮ ಊರಿಗೆ ಹೋಗುವ ರಸ್ತೆ ಮತ್ತು ಅದು ಕೃಷ್ಣರವರ ಮನೆಯಿಂದ ಅರ್ಧ ಕಿ.ಮೀ. ದೂರ ಇದೆ. ನಾನು ಠಾಣೆಗೆ ಹೋಗಿದ್ದಾಗ ಯಾವುದೇ ಆರೋಪಿತರನ್ನು ನೋಡಿಲ್ಲ. ನಿಪಿ.10 ಮತ್ತು ನಿಪಿ.13 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ.11 ಮತ್ತು ನಿಪಿ.12 ಫೋಟೋಗಳನ್ನು ಯಾಕೆ ತೆಗೆದರು ಎಂದು ಗೊತ್ತಿಲ್ಲ, ಆದರೆ ಆ ಜಾಗಕ್ಕೆ ಹೋಗಿದ್ದೇನೆ. ಅಷ್ಟು ಬಿಟ್ಟು ಬೇರೆ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**<u>ಪಾಟೀ ಸವಾಲುಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ</u>**

*2.* ದಿನಾಂಕ *14.06.2023* ರಂದು ಸಂಜೆ *5.00* ಗಂಟೆ ಸಮಯಕ್ಕೆ ಮಾಡಿದ ಮಹಜರಿಗೆ ಸಾಕ್ಷಿಯಾಗಿ ಬರಬೇಕೆಂದು ನಿಪಿ.*13* ರಂತೆ ನನಗೆ ನೋಟಿಸು ನೀಡಿದರು ಎಂದರೆ ಸರಿ. ಪೊಲೀಸರ ವಶದಲ್ಲಿ ಎಲ್ಲಾ ಆರೋಪಿಗಳು ಇದ್ದರು ಎಂದರೆ ಸರಿಯಲ್ಲ. ಅಲ್ಲಿ *2* ನೇ ಆರೋಪಿ ಚಾಸಾ.*1* ರಿಂದ ಚಾಸಾ.*4* ರವರಿಗೆ ಹೊಡೆದ ಸ್ಥಳವನ್ನು ತೋರಿಸುತ್ತೇನೆಂದು ಹೇಳಿ ಚಾಸಾ.*1* ರವರ ಮನೆಯ ಬಳಿ ಕರೆದುಕೊಂಡು ಹೋದ ಎಂದರೆ ಸರಿ. ಚಾಸಾ.*1* ರವರ ಮನೆಯ ಮುಂದೆ ಜಾಗ ತೋರಿಸಿ ಇದೇ ಜಾಗದಲ್ಲಿ ನಾವು ಚಾಸಾ.*1* ರಿಂದ ಚಾಸಾ.*4* ರವರಿಗೆ ಹಲ್ಲೆ ಮಾಡಿದ ಸ್ಥಳ ಎಂದು ಹೇಳಿದ ಎಂದರೆ ಸರಿ. ಅಲ್ಲಿ ಪೊಲೀಸರು ಮಹಜರು ಮಾಡಿ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಸಂಜೆ *5.10* ರಿಂದ *6.40* ಗಂಟೆವರೆಗೆ ನಿಪಿ.*10* ರಂತೆ ಮಹಜರು ಮಾಡಿ ಆ ಕಾಲಕ್ಕೆ ಫೋಟೋ ತೆಗೆದರು ಎಂದರೆ ಸರಿ. *2* ನೇ ಆರೋಪಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದಾಗ ಅಲ್ಲಿ ನಿಪಿ.*10* ರಂತೆ ಮಹಜರು ಮಾಡಿ ಸ್ಥಳದಲ್ಲಿಯೇ ನನ್ನ ಸಹಿ

ಪಡೆದರು ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿಯೇ ನಿಪಿ.*10*ಕ್ಕೆ ಸಹಿ ಮಾಡಿದ್ದರೂ, ಆರೋಪಿಗಳು ನನ್ನ ಊರಿನವರು ಆದ ಕಾರಣ ಅವರ ಮಾತುಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ *2* ರಿಂದ *5* ನೇ ಆರೋಪಿಗಳ ಪರ ಶ್ರೀ ಎಸ್ ಪಿ ಎಸ್ ವಕೀಲರಿಂದಃ**

1. 2 ನೇ ಆರೋಪಿ ಗಲಾಟೆಯಾದ ಜಾಗ ಎಂದು ತೋರಿಸಿಲ್ಲ ಎಂದರೆ ಸಾಕ್ಷಿ ಜಾಗಕ್ಕೆ ಬಂದಿದ್ದ ಎಂದು ನುಡಿಯುತ್ತಾರೆ. ನಿಪಿ.11 ಫೋಟೋದಲ್ಲಿ ಆರೋಪಿ ಜಗಳ ಆದ ಜಾಗ ಎಂದು ತೋರಿಸಿಲ್ಲ ಎಂದರೆ ಸರಿ. ಮಹಜರಿಗೆ ಬನ್ನಿ ಎಂದು ನನಗೆ ನೋಟಿಸು ನೀಡಿಲ್ಲ ಎಂದರೆ ಸರಿ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.